

### ಪರೀಕ್ಷಾ ವಿಧಾನ!

ಸಂತಾ ಕೆಮಿಸ್ಟ್ ಬಳಿ ಹೋಗಿ ವಿನಂತಿಸಿದ, 'ನಿಮ್ಮಿಂದ ಒಂದು ಸಹಾಯವಾಗಬೇಕಿತ್ತು...'

ಕೆಮಿಸ್ಟ್: ಏನು, ಹೇಳಿ?

ಸಂತಾ ತನ್ನ ಔಷಧಿಯ ಬಾಟಲಿಯಿಂದ ಒಂದು ಚಮಚದಷ್ಟನ್ನು ಕೆಮಿಸ್ಟ್‌ಗೆ ಕುಡಿಸಿ ಕೇಳಿದ, 'ಸಿಹಿಯಾಗಿದೆಯೆ ಹೇಳಿ?'

ಕೆಮಿಸ್ಟ್: ಇಲ್ವಲ್ಲಾ... ಏನಿದು?

ಸಂತಾ: ತುಂಬಾ ಉಪಕಾರವಾಯಿತು. ಏಕೆಂದರೆ, 'ಕೆಮಿಸ್ಟ್‌ನ ಬಳಿ ಪರೀಕ್ಷೆ ಮಾಡಿಸಿ ಈ ಮೂತ್ರದಲ್ಲಿ ಸಕ್ಕರೆಯ ಅಂಶ ಇದೆಯೆ ಎಂದು ಪತ್ತೆ ಹಚ್ಚಿಕೊಂಡು ಬಾ' ಎಂದು ಡಾಕ್ಟರ್ ತಿಳಿಸಿದ್ದರು!

★★★

### ಆಜ್ಞಾ ಪಾಲನೆ!

ಗೋಪಿ ಬಾಸ್‌ಗೆ ಹೀಗೊಂದು ಎಸ್ಸೆಮ್ಮೆಸ್ ರವಾನಿಸಿದ,

'ನನಗೆ ಹುಷಾರಿಲ್ಲ, ಕಚೇರಿಗೆ ಹಾಜರಾಗಲು ಸಾಧ್ಯವಿಲ್ಲ.'

ಬಾಸ್ ಉತ್ತರಿಸಿದರು: 'ನನಗೆ ಹುಷಾರಿಲ್ಲದಿರುವಾಗ ನಾನು ನನ್ನ ಹೆಂಡತಿಯನ್ನು ಚುಂಬಿಸುತ್ತೇನೆ. ನೀನೂ ಹಾಗೇ ಮಾಡಿ ನೋಡು.'

ಎರಡು ಗಂಟೆಯ ಬಳಿಕ ಗೋಪಿ ಬಾಸ್‌ಗೆ ಇನ್ನೊಂದು ಎಸ್ಸೆಮ್ಮೆಸ್ ಕಳಿಸಿದ, 'ನಾನೀಗ ಹುಷಾರಾಗಿದ್ದೇನೆ, ನಿಮ್ಮ ಪತ್ನಿ ತುಂಬಾ ಸ್ವೀಟ್ ಆಗಿದ್ದಾರೆ!'

★★★

### ಕಿತಾಪತಿ

ಸಂತಾ ತನ್ನ ಅವಿವಾಹಿತ ಮಗಳ ರೂಮಿನಲ್ಲಿ ಸಿಗರೇಟ್ ತುಂಡು ಕಂಡು ಉದ್ಗರಿಸಿದ, 'ದೇವರೇ, ಇವಳು 'ಸ್ಮೋಕ್' ಮಾಡುತ್ತಾಳೆ!' ಬಳಿಕ 'ವಿಸ್ಕಿ ಬಾಟಲ್ ನೋಡಿ', ಅಯ್ಯೊ ದೇವರೇ, ಡ್ರಿಂಕ್ಸ್ ಕೂಡಾ ತೆಗೆದುಕೊಳ್ತಾಳಲ್ಲಪ್ಪಾ...?!'

ಅಷ್ಟರಲ್ಲಿ ಅಲ್ಲೊಬ್ಬ ತರುಣನನ್ನು ಗಮನಿಸಿ, 'ಸದ್ಯ... ಇದೆಲ್ಲಾ ಈ ಹುಡುಗನ ಕಿತಾಪತಿ' ಎಂದು ಸಮಾಧಾನದಿಂದ ಉಸುರಿದ!

★★★

### ತಪ್ಪು

ಅಮಲಿನಲ್ಲಿದ್ದ ಗೋಪಿ ಪತ್ನಿಗೆ ಫೋನಾಯಿಸಿದ:

'ಮನೆಗೆ ಬರಲು ಸಾಧ್ಯವಿಲ್ಲ; ಕಾರಿನ ಸ್ಟೀಯರಿಂಗ್, ಗೇರ್, ಬ್ರೇಕ್... ಎಲ್ಲಾ ಕಳುವಾಗಿದೆ.'

ಒಂದು ಗಂಟೆಯ ಬಳಿಕ ಪುನಃ ಕಾಲ್ ಮಾಡಿದ.

'ಬರುತ್ತಿದ್ದೇನೆ; ಕಣ್ತಪ್ಪಿನಿಂದಾಗಿ ಮೊದಲು ನಾನು ಹಿಂದಿನ ಸೀಟಿನಲ್ಲಿ ಕೂತಿದ್ದೆ!'

★★★

### ಜಾಣತನ!

ಗುಂಡ: ಪ್ಯಾಂಟ್ ಹೊಲಿಯಲು ಎಷ್ಟು ಖರ್ಚಾಗುತ್ತದೆ?

ದರ್ಜಿ: 150 ರೂಪಾಯಿ.

ಗುಂಡ: ಚಡ್ಡಿ ಹೊಲಿಯಲು...?

ದರ್ಜಿ: 50 ರೂಪಾಯಿ.

ಗುಂಡ: ಸರಿ, ಚಡ್ಡಿಯನ್ನೇ ಹೊಲಿದು ಕೊಡು. ಆದರೆ ಉದ್ದ ಪಾದದವರೆಗಿರಲಿ!

(ಸಂಗ್ರಹ) ರಮಣ್‌ಶೆಟ್ಟಿ ರೆಂಜಾಳ್, ಮುಂಬೈ





ಉತ್ತೇಜನಕವಾದ ಒಂದು ವಾರಾಂತ್ಯದಲ್ಲಿ ನಾವು ನಮ್ಮ ಪ್ರಣಯದ ಸಂಭ್ರಮ ಆದರಿಸಿದೆವು: ಇದು ಜೋಕ್ ಅಲ್ಲ, ನಮ್ಮ ಮಂಚ ಮುರಿದುಹೋಯಿತು (ಎರಡು ಬಾರಿ!!!)
ಇದೀಗ, ನಾನು, ನನ್ನ ಸಂಗಾತಿ ಮತ್ತು ಸೆಲೆಬ್ರೇಟ್ ಲವ್ ಶಾಶ್ವತವಾಗಿ ಬೆಸೆಯಲ್ಪಟ್ಟಿದ್ದೇವೆ.

Send the queries to: solutions@celebratelovespray.com
Call: +91 80 65835301 / 90363 02751 I www.celebratelovespray.com

This is a Public Interest Initiative by Celebrate Love.

Celebrate Love
Herbal Spray & Capsules

ನಿಮ್ಮ ಎಲ್ಲ ಸಂದೇಹ, ಚಿಂತೆ ಮತ್ತು ಒತ್ತಡಗಳಿಂದ ಮುಕ್ತರಾಗಿ. ನಾವು ನಿಮ್ಮ ಸಮಸ್ಯೆಗಳನ್ನು ನಿವಾರಿಸುವ ಯತ್ನದಲ್ಲಿದ್ದೇವೆ.
ನಿಮ್ಮ ಸಂಬಂಧಗಳ ಅಥವಾ ಲೈಂಗಿಕ ಸಂಬಂಧಿತ ಪ್ರಶ್ನೆಗಳನ್ನು ಕಳುಹಿಸಿ. ಖ್ಯಾತ ವೈದ್ಯರುಗಳು ಉತ್ತರಿಸಲಿದ್ದಾರೆ.